ಸೆಲೆಬ್ರಿಟಿ

ಹನಿ

# ಅರಿಜಿತ್‌ಗೆ ಸಾಟಿಯಿಲ್ಲ!

ವಿರಾಟ್ ಕೊಹ್ಲಿ ಸದ್ಯ ಭಾರತ ಕ್ರಿಕೆಟ್ ತಂಡದ ಅತ್ಯಂತ ಜನಪ್ರಿಯ ಆಟಗಾರ. ಈತನ ಅಭಿಮಾನಿಗಳ ಸಂಖ್ಯೆ ಏರುತ್ತಲೇ ಇದೆ. ಈತ ಆಟವಾಡುವುದನ್ನು ನೋಡಲು ಸಹಸ್ರಾರು ಜನ ಸೇರುತ್ತಾರೆ. ಟೀವಿಯ ಮುಂದೆ ಲಕ್ಷಾಂತರ ಜನ ಕಾದು ಕುಳಿತಿರುತ್ತಾರೆ. ಇಂತಹ ವಿರಾಟ್ ಕೊಹ್ಲಿಯನ್ನೇ ಅಭಿಮಾನಿಯನ್ನಾಗಿ ಹೊಂದಿದಾತ ಈ ಅರಿಜಿತ್ ಸಿಂಗ್! ಸದ್ಯ ಹಿಂದಿ ಚಿತ್ರರಂಗದ 'ನಂಬರ್ ಒನ್' ಗಾಯಕ!

ಕಳೆದ ಐದಾರು ವರ್ಷಗಳಿಂದ ಬಾಲಿವುಡ್ ಹಿನ್ನೆಲೆ ಸಂಗೀತ ಲೋಕದಲ್ಲೇ ಈತನದ್ದೇ ಆಧಿಪತ್ಯ. ಯಾವ ನಿರ್ದೇಶಕರು, ಸಂಗೀತ ನಿರ್ದೇಶಕರೇ ಆಗಲಿ, ಈತನದೊಂದು ಹಾಡು ತಮ್ಮ ಸಿನಿಮಾಗೆ ಬೇಕೇ ಬೇಕು ಎನ್ನುವವವರೇ. ಅಷ್ಟೊಂದು ಡಿಮ್ಯಾಂಡು. ತುಮ್ ಹಿ ಹೋ, ಸನಮ್ ಕೆ, ಮುಷ್ಕುರಾನೆ ಕಿ ವಜಹ್ ತುಮ್ ಹೊ, ಮನ್ ಮಸ್ತ್ ಮಗನ್, ಕಬೀರಾ, ಸಾವನ್ ಆಯಾ ಹೈ, ಖಾಮೋಶಿಯಾ, ಬಾಬುಲ್ ಮೋರಾ, ಏ ದಿಲ್ ಹೈ ಮುಷ್ಕಿಲ್..– ಹೀಗೆ ಪಟ್ಟಿ ಮಾಡುತ್ತಾ ಹೋದರೆ ಈತ ಹಾಡಿದ ನೂರಾರು ಸೂಪರ್‌ಹಿಟ್ ಹಾಡುಗಳು ಸಾಲಾಗಿ ನೆನಪಿಗೆ ಬರುತ್ತವೆ. ಈಗಿನ ಈತನ ಯಶಸ್ಸಿನ ಓಟ ನೋಡಿದರೆ ಇನ್ನೂ ಐದಾರು ವರ್ಷ ಈತನದ್ದೇ ಪಾರುಪತ್ಯ ಮುಂದುವರಿಯಬಹುದು ಎನ್ನಲಾಗುತ್ತಿದೆ.

ಆದರೆ ಅರಿಜಿತ್ ಸಿಂಗ್ ಇದನ್ನು ಒಪ್ಪುತ್ತಿಲ್ಲ. '5–6 ವರ್ಷಗಳ ಕಾಲ ಖ್ಯಾತಿಯ ತುತ್ತತುದಿಯಲ್ಲಿದ್ದ ಗಾಯಕರು ಹಾಗೆಯೇ ಹೊಸನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಹಿಂದೆ ಹೀಗೆಯೇ ಆಗಿದೆ. ಹಾಗಾಗಿ ನಾನೂ ಈ ವರ್ಷ ಹಿನ್ನೆಲೆಗೆ ಸರಿಯುವ ಸಾಧ್ಯತೆ ಇದೆ' ಎಂದು ಮುಗುಳ್ನಗುತ್ತಾನೆ ಈತ. ಹಾಗೆಂದು ಈತನಿಗೆ ನಿವೃತ್ತಿಯ ವಯಸ್ಸು ಆಗಿದೆ ಎಂದುಕೊಳ್ಳಬೇಡಿ. ಈತ ಈ ವರ್ಷ ತನ್ನ 29ನೇ ವಯಸ್ಸಿಗೆ (ಬರ್ತ್‌ಡೇ 25.4.1987) ಕಾಲಿಟ್ಟಿದ್ದಾನೆ ಅಷ್ಟೆ! ಆಗಲೇ ನಿವೃತ್ತಿಯ ಮಾತು!

ಅರಿಜಿತ್ ಸಂಗೀತಪ್ರಿಯರ ಹಾಟ್‌ಫೇವರೆಟ್. ಆದರೆ ಹೊರಗಿನ ಪ್ರಪಂಚಕ್ಕೆ ಈತನ ಪರಿಚಯ ಅಷ್ಟಾಗಿ ಇಲ್ಲ. ಕುಮಾರ್ ಶಾನೂನಿಂದ ಹಿಡಿದು ಸೋನು ನಿಗಮ್‌ವರೆಗೆ ಬಾಲಿವುಡ್ ಹಿನ್ನೆಲೆ ಗಾಯನದ ತುತ್ತ ತುದಿಯೇರಿದ ಎಲ್ಲರ ಹೆಸರುಗಳೂ ಹೊರಗಿನವರಿಗೆ ಸಾಕಷ್ಟು ನೆನಪಿದೆ. ಆದರೆ ಅರಿಜಿತ್ ಬಗ್ಗೆ ಗೊತ್ತಾಗದೆ ಇರಲು ಕಾರಣ ಈತನ ಅಂತರ್ಮುಖಿ ವ್ಯಕ್ತಿತ್ವ ಮತ್ತು ನಾಚಿಕೆಯ ಸ್ವಭಾವ. ಪತ್ರಕರ್ತರನ್ನು ಕಂಡರೆ ಮಾರು ದೂರ ನಿಲ್ಲುತ್ತಾನೆ. ಮಾತು ಅಂದರೆ ಅಲರ್ಜಿ. ಇನ್ನು ಸಂದರ್ಶನ ದೂರವೇ ಉಳೀತು. 'ನೆಮ್ಮದಿಯ ಜೀವನದಲ್ಲಿ ಹೆಚ್ಚು ಮಾತನಾಡದೆ ಮೌನವಾಗಿ ಇರುವುದೇ ನನಗಿಷ್ಟ. ಈಗಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಇದು ಕಷ್ಟವೇ. ಫ್ಯಾನ್‌ಗಳ ಸಂಖ್ಯೆಯೂ ಒಂದೇ ಸಮನೆ ಹೆಚ್ಚುತ್ತಿದೆ, ಅವರ ಜತೆಗೆ ಮಾತನಾಡದಿದ್ದರೆ ಹೇಗೆ?' ಎನ್ನುವುದು ಈತನ ಸಮಸ್ಯೆ.

ಹಾಗೆ ನೋಡಿದರೆ ಈತ ಈಗ ಏರಿರುವ ಎತ್ತರಕ್ಕೆ ಬರಲು ಸಾಕಷ್ಟು ಸೈಕಲ್ ಹೊಡೆದಿದ್ದಾನೆ. 2005ರಲ್ಲಿ ಟೀವಿಯೊಂದರ ರಿಯಾಲಿಟಿ ಷೋ 'ಫೇಮ್ ಗುರುಕುಲ್'ನಲ್ಲಿ ಮೊದಲು ಈತ ಜನಪ್ರಿಯತೆಯ ರುಚಿ ಹೊಂದಿದ್ದು. ಸ್ಪರ್ಧೆಯಲ್ಲಿ ಫೈನಲ್‌ವರೆಗೆ ಏರಿದರೂ ಅಲ್ಲಿ ಸೋತುಹೋದ. ಆದರೆ ಪ್ರಶಸ್ತಿ ಗೆದ್ದವನಿಗಿಂತ ಹೆಚ್ಚು ಅರಿಜಿತ್‌ನೇ ಜನಪ್ರಿಯನಾದ. ಅಷ್ಟಾಗಿಯೂ ಸಿನಿಮಾ ಹಿನ್ನೆಲೆ ಗಾಯನಕ್ಕೆ ಅವಕಾಶ ಸಿಗಲು ಮತ್ತೂ ಆರು ವರ್ಷ ಕಾಯಬೇಕಾಯಿತು! ಅಲ್ಲಿಯವರೆಗೆ ಈತ ಸಂಗೀತ ಕಂಪೋಸಿಂಗ್ ಸಹಾಯಕನಾಗಿ ಶಂಕರ್ ಎಹ್ಸಾನ್ ಲಾಯ್, ಪ್ರೀತಂ ದಾ ಮತ್ತು ವಿಶಾಲ್–ಶೇಖರ್ ಅವರ ಜತೆ ಕೆಲಸ ಕಲಿತ. 2011ರಲ್ಲಿ 'ಮರ್ಡರ್ 2' ಮತ್ತು 'ಫಿರ್ ಮೊಹಬ್ಬತ್' ಚಿತ್ರಗಳಲ್ಲಿ ಸಿಕ್ಕಿದ ಮೊದಲ ಅವಕಾಶಗಳು ಈತನನ್ನು ಸ್ವರಸಾಮ್ರಾಜ್ಯದ ಆಕಾಶಕ್ಕೆ ಚಿಮ್ಮಿಸಿದವು. ಈಗ ಈತ ಹಿನ್ನೆಲೆ ಗಾಯನ ಕ್ಷೇತ್ರಕ್ಕೆ ಬರುವ ಎಲ್ಲರಿಗೂ ರೋಲ್ ಮಾಡೆಲ್. ಸಂಗೀತ ನಿರ್ದೇಶಕರ ಪ್ರಕಾರ, ಈತ ಹಾಡಿಗೆ ಜೀವ ಕೊಡುವಾತ! ಹಿಂದಿ, ಬಂಗಾಳಿ ಅಲ್ಲದೆ ಗುಜರಾತಿ, ತಮಿಳು, ತೆಲುಗು, ಮರಾಠಿ, ಅಸ್ಸಾಮಿ ಮತ್ತು ಕನ್ನಡ ಸಿನಿಮಾಗಳಿಗೂ ಹಾಡಿದ್ದಾನೆ.

2014ರಲ್ಲಿ ತೆರೆಗೆ ಬಂದ 'ಆಶಿಖಿ–2' ಚಿತ್ರದ 'ತೂ ಹಿ ಹೋ' ಹಾಡು ಬಾಲಿವುಡ್‌ನಲ್ಲಿ ದೊಡ್ಡ ಸ್ವರದಲ್ಲಿ ಮಾರ್ದನಿಗೊಂಡಿತು. ಇದಕ್ಕಾಗಿ ಫಿಲಂಫೇರ್ ಪ್ರಶಸ್ತಿಯನ್ನು ಪಡೆದದ್ದು ಈತನ ಚಿನ್ನದ ಕ್ಷಣ. ಆ ವರ್ಷ ಈತ ಗಳಿಸಿದ ಒಟ್ಟು ಆದಾಯ 35 ಕೋಟಿ ರೂಪಾಯಿ! ಅಲ್ಲಿಂದೀಚೆಗೆ ಒಂದರ ಹಿಂದೆ ಒಂದರಂತೆ ಸೂಪರ್‌ಹಿಟ್ ಹಾಡುಗಳು. ಕಳೆದ ವರ್ಷ ಮತ್ತೆ 'ವರ್ಷದ ಅತ್ಯುತ್ತಮ ಗಾಯಕ' ಎಂಬ ಫಿಲಂಫೇರ್ ಪ್ರಶಸ್ತಿ ಪಡೆದ ಈತ ಈ ವರ್ಷವೂ ಆ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾನೆ. ಕಳೆದ ಆರು ವರ್ಷಗಳಲ್ಲಿ 86 ನಾಮಿನೇಶನ್ ಗಳನ್ನು ಹೊಂದಿ 26 ಪ್ರಶಸ್ತಿಗಳನ್ನು ಗೆದ್ದದ್ದು ದಾಖಲೆ.

ಟೀವಿ ರಿಯಾಲಿಟಿ ಷೋನಲ್ಲಿ ಸಹಸ್ಪರ್ಧಿಯಾಗಿದ್ದಾಕೆಯನ್ನು ಮದುವೆಯಾದ ಅರಿಜಿತ್ ಆ ಬಳಿಕ ಡೈವೋರ್ಸ್ ನೀಡಿದ. ಈ ವಿಷಯಕ್ಕೆ ಸಂಬಂಧಿಸಿ ಸಂದರ್ಶನದಲ್ಲಿ ಪ್ರಶ್ನೆ ಕೇಳಿದ ಪತ್ರಕರ್ತನ ಮೇಲೆ ಹಲ್ಲೆ ನಡೆಸಿ ಲಾಕಪ್ ಸೇರಿದ. ಮರುದಿನವೇ ಬಿಡುಗಡೆಯಾಗಿ ಬಂದು ಕಠಿಣ ಪರಿಶ್ರಮದಲ್ಲಿ ತೊಡಗಿದ. 2013ರಲ್ಲಿ ಬಾಲ್ಯದ ಗೆಳತಿ ಕೋಯೆಲ್ ರಾಯ್‌ಗಳನ್ನು ಮದುವೆಯಾದ. ಈಗ ಖ್ಯಾತಿಯ ಉತ್ತುಂಗದಲ್ಲಿ 'ಸ್ವತಂತ್ರ ಸಂಗೀತ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಆಸೆಯಿದೆ. ಸಂಗೀತದ ತಂತ್ರಜ್ಞಾನದ ಬಗೆಗ ಕಲಿಯುವುದೂ ಸಾಕಷ್ಟಿದೆ' ಎನ್ನುವ ವಿನಯವಂತ. ಅಂದ ಹಾಗೆ ಪಶ್ಚಿಮ ಬಂಗಾಳದ ಅರಿಜಿತ್‌ಗೆ ಮೀನಿನ ಖಾದ್ಯ ಎಂದರೆ ಭಾರೀ ಇಷ್ಟ. ಮಾರುಕಟ್ಟೆಗೆ ಸ್ವತಃ ಹೋಗಿ ಮೀನು ತಂದು ಹುರಿದು ತಿನ್ನುವುದು ಈತನ ಅತ್ಯಂತ ಪ್ರಿಯ ಹವ್ಯಾಸವಂತೆ! ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65